MVC No.125/2021 PW-1

**<u>ದಿನಾಂಕ 06.11.2025 ರಂದು ಸಾಕ್ಷಿಯನ್ನು ಕರೆಯಿಸಿ, ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಪಾಟೀ ಸವಾಲುಃ ಎದುರುದಾರರಾದ ಆರ್ 2 ಪರ ಶ್ರೀ ಎ ಕೆ ಕೆ ವಕೀಲರಿಂದಃ</u>**

ಅರ್ಜಿದಾರ ನನ್ನ ಮಗ. ಅಪಘಾತವಾದಾಗ ನನ್ನ ಮಗನ ಜೊತೆ ನಾನೇ ಇದ್ದೆ. ನಾನೇ ಮಾಹಿತಿಯನ್ನು ನೀಡಿ ಪ್ರಕರಣ ಹಾಕಿಸಿರುತ್ತೇನೆಂದರೆ ನಿಜ. ಪ್ರಕರಣವನ್ನು ಓದಿರುತ್ತೇನೆ. ಅಪಘಾತವಾದಾಗ ನನ್ನ ಹೆಂಡತಿ ಇದ್ದರು ಎಂದು ಅರ್ಜಿಯಲ್ಲಿ ತಿಳಿಸಿರುತ್ತೇನೆಂದರೆ ಸಾಕ್ಷಿಯು ನಾನು ಇದ್ದೆ ಎಂದು ನುಡಿಯುತ್ತಾರೆ. ಈ ಬಗ್ಗೆ ಸುಳ್ಳು ಹೇಳುತ್ತಿದ್ದೇನೆಂದರೆ ಸುಳ್ಳು. ಅಪಘಾತವಾದಾಗ ನನ್ನ ಮಗನಿಗೆ 11 ವರ್ಷ ವಯಸ್ಸಾಗಿತ್ತು. ಆಗ 6 ನೇ ತರಗತಿ ಓದುತ್ತಿದ್ದನು. ಈ ಬಗ್ಗೆ ದಾಖಲೆಯನ್ನು ಹಾಜರುಪಡಿಸಿರುತ್ತೇನೆ. ಸರ್ಕಾರಿ ಶಾಲೆಯಲ್ಲಿ ಓದುತ್ತಿದ್ದಾನೆ. ಅವರ ಶಿಕ್ಷಣದ ದಾಖಲೆಗಳು ಏನೂ ನೀಡಿಲ್ಲ. ಈಗ ನನ್ನ ಮಗ 10 ನೇ ತರಗತಿ ಓದುತ್ತಿದ್ದಾನೆ.

ಅಪಘಾತವಾದಾಗ ನನ್ನ ಮಗನನ್ನು ಸಾರ್ವಜನಿಕ ಸರ್ಕಾರಿ ಆಸ್ಪತ್ರೆ ಚನ್ನಪಟ್ಟಣಗೆ ಚಿಕಿತ್ಸೆಗಾಗಿ ಕರೆದುಕೊಂಡು ಹೋಗಿರುತ್ತೇನೆ. 15 ದಿನಗಳ ಕಾಲ ದಾಖಲಾಗಿರುತ್ತೇನೆ. ಈ ಬಗ್ಗೆ ದಾಖಲೆಯನ್ನು ಹಾಜರುಪಡಿಸಲು ತೊಂದರೆ ಇಲ್ಲ. ನನ್ನ ಮಗನಿಗೆ ವೈದ್ಯಕೀಯ ಚಿಕಿತ್ಸೆಗಾಗಿ 1 ಲಕ್ಷ ರೂಪಾಯಿ ಹಣ ಖರ್ಚಾಗಿದ ಬಗ್ಗೆ ದಾಖಲೆ ಇದೆ. ಈ ಬಗ್ಗೆ ಸುಳ್ಳು ಹೇಳುತ್ತಿದ್ದೇನೆಂದರೆ ಸುಳ್ಳು. ನನ್ನ ಮಗನಿಗೆ ಶಸ್ತ್ರ ಚಿಕಿತ್ಸೆ ಆಗಿಲ್ಲ. ಅಪಘಾತದಿಂದ ನನ್ನ ಮಗನಿಗೆ ಕಾಲು, ಹಲ್ಲು, ತಲೆಗೆ, ಸೊಂಟಕ್ಕೆ ಪೆಟ್ಟಾಗಿತ್ತು. ಈ ಗಾಯಗಳು ವಾಸಿಯಾಗಿವೆ ಎಂದರೆ ಸುಳ್ಳು. ನನ್ನ ಮಗನಿಗೆ ಶಿಕ್ಷಣ ಮಾಡಲು ತೊಂದರೆ ಇಲ್ಲ ಎಂದರೆ ಸುಳ್ಳು. ಗಾಯಗಳು ವಾಸಿಯಾಗಿವೆ ಎಂದರೆ ಸುಳ್ಳು. ಘಟನೆ ಬಗ್ಗೆ ನಾನೇ ದೂರು ನೀಡಿರುತ್ತೇನೆ. ಅಂತಿಮ ವರದಿಯನ್ನು ಪೋಲಿಸರು ಸಲ್ಲಿಸಿರುತ್ತಾರೆ.

ಅಪಘಾತ ಪಡಿಸಿದ ವಾಹನದ ಸಂಖ್ಯೆ ನೆನಪಿಲ್ಲ. ನಾನು ಸದರಿ ವಾಹನವನ್ನು ನೋಡಿರುತ್ತೇನೆ. ಸದರಿ ವಾಹನದ ಚಾಲಕನನ್ನು ನೋಡಿರುತ್ತೇನೆ. ಸಯ್ಯದ್ ಔರ್ಯ ಉಸೇನ್ ಸದರಿ ವಾಹನದ ಚಾಲಕನಾಗಿದ್ದ. ಅವರು ನನಗೆ ಪರಿಚಯವಿಲ್ಲ. ದೂರು ನೀಡಿದಾಗ ಚಾಲಕನ ಹೆಸರು ಗೊತ್ತಾಗಿರುತ್ತದೆ. ನನ್ನ

ಆಧಾರ್ ಕಾರ್ಡ್ ಮತ್ತು  ನನ್ನ ಮಗನ ಆಧಾರ್ ಕಾರ್ಡ್ ಅನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ತೊಂದರೆ ಇಲ್ಲ. ಈ ನನ್ನ ಮಗನಿಗೆ ಯಾವುದೇ ತೊಂದರೆ ಇಲ್ಲದಿದ್ದರೂ  ಸುಳ್ಳು ಹೇಳುತ್ತಿದ್ದೇನೆಂದರೆ ಸುಳ್ಳು.

**ಮರುವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನವನ್ನು ಗಣಕೀಕರಣ ಮಾಡಲಾಯಿತು)**Na**

ಓ ಹೇ ಕೇ ಸ ಒ

**(ವೆಂಕಟೇಶಪ್ಪ. ವಿ)**
**ಹಿರಿಯ ಸಿವಿಲ್ ನ್ಯಾಯಾಧೀಶರು**
**ಮತ್ತು ಜೆ.ಎಂ.ಎಫ್.ಸಿ.,ಚನ್ನಪಟ್ಟಣ.**